International Journal of Kannada Research 2016; 2(2): 32-37




International Journal of Kannada Research
www.kannadajournal.com

ISSN: 2454–5813
IJSR 2016; 2(2): 32-37
© 2016 IJKS
www.kannadajournal.com
Received: 08-12-2015
Accepted: 10-01-2016

ಡಾ. ಕಾವ್ಯಶ್ರೀ. ಜಿ
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ದಾವಣಗೆರೆ–577004.

Correspondence
ಡಾ. ಕಾವ್ಯಶ್ರೀ. ಜಿ
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ದಾವಣಗೆರೆ–577004.

# ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯಲ್ಲಿನ ಸಾಂಸ್ಕೃತಿಕ ತುಡಿತ ಮತ್ತು ಸಂಘರ್ಷಗಳು

**ಡಾ. ಕಾವ್ಯಶ್ರೀ. ಜಿ**

ಖ್ಯಾತ ಕವಿ ಎಂದೇ ಹೆಸರಾಗಿರುವ ಜಂಬಣ್ಣ ಅಮರಚಿಂತ ಅವರು ರಾಯಚೂರು ಜಿಲ್ಲೆಯವರಾಗಿದ್ದು ಹಿಂದುಳಿದ ವರ್ಗಕ್ಕೆ ಸೇರಿದವರು. 1945 ರ ಎಪ್ರಿಲ್ 7 ರಂದು ಅನಕ್ಷರಸ್ತ ಕುಟುಂಬದಲ್ಲಿ ಜನಿಸಿದ ಇವರ ಕೌಟುಂಬಿಕ ವಾತಾವರಣದ ಸುತ್ತಮುತ್ತಲೂ ಅಗಸರು, ಕೊರವರು, ಕಬ್ಬಲಿಗರು ಹೀಗೆ ಮೊದಲಾದ ವೈವಿಧ್ಯಮಯವಾಗಿ ಹರಡಿಕೊಂಡ ಶೂದ್ರ ಬದುಕು ಇತ್ತು. ಇಂತಹ ಬದುಕಿನ ರೀತಿ ನೀತಿ ಮತ್ತು ಸಂಸ್ಕೃತಿಗಳಿಂದ ಪ್ರಭಾವಿತರಾಗಿ ಅದರ ಅನುಭವ ಉಂಡ ಜಂಬಣ್ಣ ಅವರಿಗೆ ಆ ಜನರ ನೋವು ನಲಿವು ಸಂಕಟಗಳೆಲ್ಲ ಬಹಳವಾಗಿ ಕಾಡಿತ್ತು. ಅಂತೆಯೇ ಇವರ ಕವನಗಳಲ್ಲಿ ಕೆಳಸ್ತರದ ಜನತೆಯ ಸಂಸ್ಕೃತಿಯ ಸಂಘರ್ಷ, ಹತಾಶೆ, ನೋವು, ಹಾಗು ಜನಪರ ಕಾಳಜಿಗಳು ವ್ಯಕ್ತವಾಗಿವೆ.

ಜಂಬಣ್ಣ ಅಮರಚಿಂತರು ತಮ್ಮ ಬರಬಣಿಗೆಯನ್ನು ಪ್ರಾರಂಭಿಸುತ್ತಲೇ ನವ್ಯದ ಪ್ರಭಾವಕ್ಕೆ ಒಳಗಾದರು. ಇವರ ಮೇಲಾದ ನವ್ಯ ಸಾಹಿತ್ಯದ ಗಂಭೀರ ಪರಿಣಾಮ ಇವರನ್ನು ಹೊರಬರಲು ಬಿಡಲಿಲ್ಲ. ಅಷ್ಟಲ್ಲದೇ ತೆಲುಗಿನ ವಿಪ್ಲವ ಸಾಹಿತ್ಯದೊಂದಿಗೆ ಮಹಾರಾಷ್ಟ್ರದ ಪ್ಯಾಂಥರ್ ಸಾಹಿತ್ಯವು ಕೂಡ ಇವರ ಬೆಳವಣಿಗೆಗೆ ಪ್ರೇರಣೆ ನೀಡಿತು. ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ ಹಾಗು ಎಡಪಂಥೀಯ ವಿಚಾರಧಾರೆಗಳು ಅಮರಚಿಂತರ ಬರವಣಿಗೆಗೆ ಹೊಸ ಆಯಾಮವನ್ನೇ ಒದಗಿಸಿದವು.

ಇವರ ಸೃಜನಶೀಲ ಸಾಹಿತ್ಯಕ್ಕೆ ಶೋಷಣೆ–ನೋವಿಗೆ ಒಳಗಾದ ಬಡಜನರ ಜೀವನದ ಘಟನೆಗಳೇ ವಸ್ತುಗಳಾಗಿವೆ. ತಮ್ಮ ಕವನ–ಕಾದಂಬರಿಯಲ್ಲಿ ದಲಿತರ ನೋವು ಹಾಗೂ ಅವರ ಜೀವನದ ಸಾಂಸ್ಕೃತಿಕ ಅನೇಕ ಮಗ್ಗಲುಗಳನ್ನು ಪರಿಚಯಿಸಿದ್ದಾರೆ.

'ಪೆಟ್ರೋಮ್ಯಾಕ್ಸ್ ಹೊತ್ತವರು', 'ಅಧೋ ಜಗತ್ತಿನ ಅಕಾವ್ಯ', 'ಕೋಟೆ', 'ಗೊಮ್ಮಟೇಶ್ವರನ ಜತೆ ಆಪ್ತಾಲೋಚನೆ', 'ಅದಮ್ಯ', 'ಕೆಲವು ಸವಾಲು ಸಾಲು' ಮೊದಲಾದ ಕವನ ಸಂಕಲನಗಳು ಮುಖ್ಯವಾಗಿವೆ.

ಜಂಬಣ್ಣ ಅಮರಚಿಂತ ಅವರ ಕಾದಂಬರಿ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕೊರವ ಜನಾಂಗದ ಬದುಕು ಮತ್ತು ಸಂಸ್ಕೃತಿಯನ್ನು ವಿವರಿಸಿದೆ. ಅಲ್ಲದೇ ಬುಡಕಟ್ಟು ಸಂಸ್ಕೃತಿಗಳನ್ನು ತನ್ನ ಅಧ್ಯಯನದಲ್ಲಿ ತೊಡಗಿಸಿದೆ. ಜನಾಂಗೀಯ ಅಧ್ಯಯನಕ್ಕೆ, ಉಪಸಂಸ್ಕೃತಿಗಳ ಅಧ್ಯಯನಕ್ಕೆ ಇದು ಆಕರವನ್ನು ಒದಗಿಸುತ್ತದೆ. ಈ ರೀತಿಯಾಗಿ ಜಂಬಣ್ಣ ಅಮರಚಿಂತರು ಕವಿ, ಕಾದಂಬರಿಕಾರರಾಗಿ ನಾಡಿನ ಪ್ರಮುಖ ಬಂಡಾಯ ಸಾಹಿತಿಗಳಾಗಿದ್ದಾರೆ.

"ಸಾಹಿತ್ಯವು ಜೀವನದ ಪ್ರತಿಸೃಷ್ಟಿಯಾಗಿರುವುದರಿಂದ ಲೇಖಕನು ವಿಶಿಷ್ಟ ಸಾಂಸ್ಕೃತಿಕ ಪರಿಸರದಲ್ಲಿ ಜೀವನವನ್ನು ಪ್ರತಿಸೃಷ್ಟಿಸುವಾಗ, ಕೃತಿಗೆ ಆ ನೆಲದ ಭಾಷೆ ದ್ರವ್ಯವಾಗಿ ಬರುತ್ತದೆ. ಆದ್ದರಿಂದ ಕೃತಿಯ ವಸ್ತು, ಕಥಾ ಸಂವಿಧಾನ, ಪಾತ್ರ ಚಿತ್ರಣ, ಜೀವನ ದರ್ಶನದಷ್ಟೇ ಭಾಷೆಯೂ ಮುಖ್ಯವಾಗುತ್ತದೆ. ಲೇಖಕ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಷ್ಟು ಕೃತಿಯ ಉದ್ದೇಶಿತ ಪರಿಣಾಮ ಪೂರ್ಣವಾಗುವುದು. ಆದ್ದರಿಂದ ಸಾಹಿತ್ಯ ಕೃತಿಯನ್ನು ಕುರಿತಾದ ಯಾವುದೇ ಆಲೋಚನೆಯು ಅದರ ಭಾಷೆಯ ನೆಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ"[1] ಎನ್ನುವ ಖ್ಯಾತ ವಿಮರ್ಶಕ ಎಚ್.ಎಸ್.ರಾಘವೇಂದ್ರರಾವ್ ಅವರ ಮಾತು ಈ ಪ್ರಾದೇಶಿಕ ಕಾದಂಬರಿಯ ಹಿನ್ನೆಲೆಯಲ್ಲಿ ಉಚಿತವೆನಿಸುತ್ತದೆ. ಕಾದಂಬರಿಕಾರನಲ್ಲಿ ಪರಿಸರದ ಭಾಷಾಪ್ರಜ್ಞೆ, ಆಡುನುಡಿಯ ಸ್ವರೂಪ, ಮಣ್ಣಿನ ವಾಸನೆಯನ್ನು ಗರ್ಭೀಕರಿಸುವ ಶಬ್ದಗಳಿರುತ್ತವೆ. ಇದರಲ್ಲಿಯ ಸಾಂಸ್ಕೃತಿಕ ಮೂಲ, ಭಾಷಾ ವಿನ್ಯಾಸ ಇತ್ಯಾದಿಗಳನ್ನೆಲ್ಲ ಹೆಕ್ಕಿ ನೋಡುವ ವಿಶಿಷ್ಟವಾದ ದೃಷ್ಟಿ ಕಾದಂಬರಿಕಾರನದಾಗಿರಬೇಕು. ಏಕೆಂದರೆ ಕಾದಂಬರಿಯ ಅಭಿವ್ಯಕ್ತಿಗೆ ಭಾಷೆಯೇ ತಾಯಿ ಬೇರಾಗಿರುತ್ತದೆ.

ಸಾಹಿತ್ಯ ಹುಟ್ಟುವುದು, ಸೃಷ್ಟಿಯಾಗುವುದು ಭಾಷಾ ಸಮುದಾಯದ ಒಂದು ವಿಶಿಷ್ಟತೆ. ಸಾಹಿತ್ಯಿಕ–ಸಾಂಸ್ಕೃತಿಕ ಛಾಪನ್ನು ಸಕಾರಾತ್ಮಕವಾದ ರೀತಿಯಲ್ಲಿ ಒಪ್ಪಿಕೊಳ್ಳುವ ಧೋರಣೆಯಾಗಿದೆ. ಒಂದು ರೀತಿಯಲ್ಲಿ ಈ ಪ್ರಾದೇಶಿಕತೆ ಸಾಹಿತ್ಯದಲ್ಲಿ ಬಳಸುವ ಒಂದು ಸಂಸ್ಕೃತಿಯೆಂದು ಹೇಳಬಹುದು. ಜನಜೀವನಕ್ಕೆ ಸ್ಪಂದಿಸುವಂಥ ಜೀವನದ ಅನನ್ಯ ಆಸಕ್ತಿ ಇದು.

ಕನ್ನಡ ಕಾದಂಬರಿ ಸಾಹಿತ್ಯ ನಿರ್ಮಾಣದಲ್ಲಿ ಪ್ರಾದೇಶಿಕತೆ ಪಡೆದ ಸಾರ್ಥಕತೆ ಅಪೂರ್ವವಾದದ್ದು. ಒಂದು ಸೀಮಿತ ಜನಾಂಗಕ್ಕೆ ಬೇಕಾದ ಹಳೆಯ ಮೌಲ್ಯಗಳು, ಆದರ್ಶಗಳು, ನಂಬಿಕೆಗಳು, ಆಚರಣೆಗಳು, ಆಧುನಿಕತೆ, ಜಾನಪದೀಯತೆ, ದೇಸಿಯತೆ, ಗ್ರಾಮೀಣ ಬದುಕು ಅಲ್ಲದೇ ನಾಗರಿಕತೆಯ ಪ್ರಭಾವಕ್ಕೊಳಪಟ್ಟು ಹೊಸ ಗಾಳಿ ಬೀಸುವ, ಕ್ರಮೇಣ ಸ್ಥಿತ್ಯಂತರಗೊಳ್ಳುವ ಗ್ರಾಮೀಣ ಬದುಕು, ಪ್ರಾದೇಶಿಕ ಶ್ರೇಷ್ಠತೆಯ ಅಭಿಮಾನ, ಈ ರೀತಿಯಾಗಿ ತನ್ನದೇಯಾದ ಭಾಷಾ ಪರಿಸರವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪ್ರಾದೇಶಿಕತೆಯೂ ಕಾದಂಬರಿಯಲ್ಲಿ ಗಣ್ಯ ಸ್ಥಾನವನ್ನು ಗಿಟ್ಟಿಸಿಕೊಳ್ಳುತ್ತದೆ.. ಕಾದಂಬರಿಕಾರ ಕೂಡ ಅಲ್ಲಿನ ಜನಸಮುದಾಯದೊಂದಿಗೆ ಒಂದಾಗಿ ಸಂಸ್ಕೃತಿಯನ್ನು ಅರ್ಥೈಸಿಕೊಂಡು ಅವರ ಕಷ್ಟ–ಸುಖಗಳಲ್ಲಿ ಭಾಗಿಯಾಗಬೇಕಾಗುತ್ತದೆ. ಸಾಹಿತ್ಯ ಜನ ಜೀವನದ ಪ್ರತಿಬಿಂಬ. ಸಮಾಜಕ್ಕೂ ಸಾಹಿತ್ಯಕ್ಕೂ ಅವಿನಾಭಾವ ಸಂಬಂಧ. ಇಂಥ ಸಮಾಜದ ಹೊರಜಗತ್ತಿನ ಯಥಾವತ್ತಾದ ಜನಜೀವನದ ಚಿತ್ರಣವನ್ನು ತನ್ನ ಕೃತಿಯಲ್ಲಿ ಬಿಂಬಿಸುವ ಲೇಖಕ ತನ್ನ ಬೌದ್ಧಿಕತೆಯ ಕಸರತ್ತಿಗಿಂತ ವಸ್ತುಸ್ಥಿತಿಯ ಪ್ರಜ್ಞೆಯುಳ್ಳವನಾಗಿರಬೇಕು, ಅಂದಾಗ ಮಾತ್ರ ಕಾದಂಬರಿ ಲೋಕಾನುಭವದ ವರದಿಯಂತೆ ಕಂಡುಬರುವುದಿಲ್ಲ.

ಸಮಾಜದಿಂದ ಉಂಟಾದ ಅನುಭವವನ್ನು ಸಾಹಿತ್ಯಕ್ಕೆ ರವಾನಿಸುವ ಪ್ರಕ್ರಿಯೆಯಲ್ಲಿ ಬರಹಗಾರ ಸಂಯಮ, ತಾಳ್ಮೆ, ಕೌಶಲ್ಯ, ಕಲಾತ್ಮಕತೆ, ಸಹಜತೆಯನ್ನು ಹೆಚ್ಚಾಗಿ ತೋರಬೇಕು. ಲೋಕಾನುಭವ ಸಾಹಿತಿಯ ಮನಸ್ಸಿನ ಮೂಸೆಯಲ್ಲಿ ಹೊಕ್ಕು ಹೊರಬಂದಾಗ ಪಡೆಯುವ ಮರುಸೃಷ್ಟಿಯೇ ಸಾಹಿತ್ಯ. "ಸಾಹಿತ್ಯದ ಮೂಲ ಸಾಮಗ್ರಿ ಹೊರ ಪ್ರಪಂಚದಿಂದ ಬರುತ್ತದೆ. ಆದ್ದರಿಂದಲೇ ನಾವು ಅದನ್ನು ಪರಿಸರದ ಪ್ರತಿಬಿಂಬ ಎನ್ನುತ್ತೇವೆ. ಈ ಮೂಲ ಸಾಮಗ್ರಿ ಕವಿಯ ಮನಸ್ಸನ್ನು ಪ್ರವೇಶಿಸಿದ ಮೇಲೆ ಅವನ ಭಾವ ಪ್ರವಾಹದಲ್ಲಿ ನೆನೆದು ಅವನ ಸ್ವಂತ ಅನುಭವವಾಗುತ್ತದೆ. ಅದು ಪ್ರಾಮಾಣಿಕ ಎನಿಸಬೇಕಾದರೆ ಹಾಗಾಗಲೇಬೇಕು".[2] ಇಂಥ ಪ್ರಾಮಾಣಿಕವಾದ ಅನುಭವ ದೊರೆಯುವುದು ಸಾಹಿತಿ ಬದುಕುವ ಸುತ್ತಮುತ್ತಲಿನ ಪರಿಸರದಿಂದ; ತನ್ನ ಜನರ ಆಚಾರ, ವಿಚಾರ, ಧರ್ಮ, ಆದರ್ಶ, ದೇವರು, ನಂಬಿಕೆ ಇವೆಲ್ಲವುಗಳಿಂದ. ಅಲ್ಲದೇ ಸಮುದ್ರ, ಗುಡ್ಡ–ಬೆಟ್ಟ, ಹೊಳೆ ಇವಷ್ಟೆ ಪರಿಸರ ಎಂದಲ್ಲ. ಭಾಷೆ, ಸಂಸ್ಕೃತಿ, ಆಚರಣೆ, ಸಂಪ್ರದಾಯ ಎಲ್ಲವೂ ಪರಿಸರವೇ ಹೌದು. ಅದೆಲ್ಲ ಪ್ರಾಕೃತಿಕ ಅಭಿವ್ಯಕ್ತಿಯೇ ಆಗುತ್ತದೆ. ಸಾಹಿತಿ ತಾನು ಗ್ರಹಿಸಿದ ಅನುಭವ ವಿಶೇಷತೆಗಳನ್ನೆಲ್ಲ ತನ್ನಲ್ಲಿ ಸಾಕ್ಷಾತ್ಕರಿಸಿಕೊಂಡು ಅದರಂತೆ ಬದುಕಿ, ಬದುಕನ್ನು ಬರೆಯುವ, ಅರ್ಥೈಸುವ, ತಿಳಿಯುವ ನಿರಂತರ ಕ್ರಿಯೆಯಲ್ಲಿ ಪರಿಸರದ ಪ್ರಭಾವ ಖಂಡಿತ ಇದ್ದೇ ಇರುತ್ತದೆ.

"ಈ ದೇಸಿ ಕೇವಲ ಭಾಷಾ ವಿನ್ಯಾಸವಾಗಿರದೇ ಅದು ಒಂದು ಸಾಹಿತ್ಯದ ಸತ್ವವನ್ನು, ಆ ಸಾಹಿತ್ಯವು ಹುಟ್ಟಿಕೊಳ್ಳುವ ಭಾಷಾ ಸಮುದಾಯದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಹಾಗೂ ಆ ಸಾಹಿತ್ಯಕ್ಕಿರುವ ತನ್ನದೇ ಆದ ಸ್ವಾಯತ್ತತೆಯನ್ನು, ಗುಣಾತ್ಮಕವೆಂದು ಒಪ್ಪಿಕೊಳ್ಳುವ ಧೋರಣೆ ಅಥವಾ ಸಿದ್ಧಾಂತವಾಗಿದೆ." ಎಂದು ಪ್ರೊ.ರಾಜೇಂದ್ರ ಚೆನ್ನಿ ಅವರು ಅಭಿಪ್ರಾಯ ಪಡುತ್ತಾರೆ.[3] ಈ ದೇಸಿಯತೆ ಒಳಗೊಳ್ಳುವ ಮುಖ್ಯ ಅಂಶಗಳೆಂದರೆ ಗ್ರಾಮೀಣ ಜೀವನದ ದುಡಿಮೆ, ದೇವರು–ಧರ್ಮ, ಹಬ್ಬ–ಹರಿದಿನಗಳ ಮತ್ತು ಸಂಸ್ಕೃತಿಗಳ ಆಚರಣೆಗಳಾಗಿವೆ. ಪ್ರಾದೇಶಿಕ ಕಾದಂಬರಿಯಲ್ಲಿ ಸೃಷ್ಟಿಗೊಂಡ ಪಾತ್ರಗಳು ಆಯಾ ಪ್ರದೇಶ–ಪರಿಸರಕ್ಕೆ ಸೀಮಿತವಾದುದು. ಅಲ್ಲಿನ ಜೀವನಕ್ರಮ ಸಿದ್ಧಾಂತವನ್ನೆ ರೂಢಿಸಿಕೊಂಡವುಗಳಾಗಿವೆ. ಅದೇ ಶ್ರೇಷ್ಠವಾಗಿ ಪರಂಪರಾಗತ ಆದರ್ಶ, ಮೌಲ್ಯ, ಶ್ರದ್ಧೆಯನ್ನು ಬಿಂಬಿಸುವಂಥವು. ಅಲ್ಲಿನ ಪ್ರಾದೇಶಿಕಾಂಶಗಳನ್ನು ಬಿಟ್ಟು ಆ ಪಾತ್ರಗಳನ್ನು ನೋಡಲಾಗದು; ಅಳೆಯಲಾಗದು. ಪಾದೇಶಿಕ ಕಾದಂಬರಿಕರ್ತನ ದೃಷ್ಟಿ ಕೇವಲ ಪಾತ್ರ ಕೇಂದ್ರಿತವಾಗಿರದೇ ಪರಿಸರದ ಸಮಷ್ಟಿ ಪ್ರಜ್ಞೆಯನ್ನು ಸೂಚಿಸುತ್ತದೆ.

ಪ್ರಾದೇಶಿಕ ಕಾದಂಬರಿಗಳು ಚಿತ್ರಿಸುವ ಜನವರ್ಗ, ಜೀವನ ಕ್ರಮಗಳನ್ನೆಲ್ಲ ನೋಡಿದಾಗ ಸಮಾಜಶಾಸ್ತ್ರಜ್ಞ ಹಾಗೂ ಮಾನವಶಾಸ್ತ್ರಜ್ಞರಿಗೂ ಅಪಾರವಾದ ಆಕರ ಸಾಮಗ್ರಿ ಸಿಗುವುದು ಖಂಡಿತ. ಇಲ್ಲಿರುವ ಜಾತಿ, ಪಂಗಡ, ಉಪಜಾತಿ, ಉಪಸಂಸ್ಕೃತಿ, ಬುಡಕಟ್ಟು ಜನಾಂಗ–ಸಂಸ್ಕೃತಿ ಈ ಎಲ್ಲ ವಿಶೇಷಗಳ ಜನರು ಬಂದು, ಅವರ ಉದ್ಯೋಗ, ವೃತ್ತಿ–ಪ್ರವೃತ್ತಿ, ಹವ್ಯಾಸ, ನಂಬಿಕೆ, ಬೇಟೆ, ಬಲಿ, ಹರಕೆ, ಜೀತ, ದೇವದಾಸಿ ಪದ್ಧತಿ–ಇಂಥವುಗಳ ಬಗ್ಗೆ ಅನೇಕ ವಿಷಯ–ವಿವರಗಳು ಹೊರಬರುತ್ತವೆ. "ಸಮಗ್ರತೆಯಿಂದ ಜೀವನದ ಸಂಕೀರ್ಣತೆಯೂ ಇಲ್ಲಿ ಚೆನ್ನಾಗಿ ವ್ಯಕ್ತವಾಗುತ್ತದೆ. ಒಂದು ತಲೆಮಾರಿನ ಕೆಚ್ಚು, ಛಲ, ಜೀವನೋತ್ಸಾಹ, ಅಜ್ಞಾನ, ಬಡತನ ಇವೆಲ್ಲವುಗಳು ತಮ್ಮ ಸಂಕೀರ್ಣತೆಯೊಂದಿಗೆ ಬಣ್ಣ ವಾಸನೆಗಳ ವಿವರಗಳೊಂದಿಗೆ ಓದುಗನ ಮನಸ್ಸನ್ನು ಮುತ್ತಿ ಬಿಡುತ್ತವೆ. ಇಲ್ಲಿಯ ವ್ಯಕ್ತಿಗಳನ್ನು ನಿಜ ಜೀವನದಲ್ಲಿ ಅಕಸ್ಮಾತಾಗಿ ಭೇಟಿಯಾದರೆ ಕಾನೂರು, ಮುತ್ತಳ್ಳಿಗಳ ಕ್ಷೇಮ ಸಮಾಚಾರಗಳನ್ನು ಕೇಳಬೇಕೆಂದು ಮನಸ್ಸಾಗುತ್ತದೆ." ಎಂಬ ಹೇಳಿಕೆ (ಮೂರ್ತಿರಾವ್ ಎ.ಎನ್, ಸಾಹಿತ್ಯ ಮತ್ತು ಸತ್ಯ,) ಕಾನೂರು ಸುಬ್ಬಮ್ಮ ಹೆಗ್ಗಡತಿಯನ್ನುದ್ದೇಶಿಸಿ ಹೇಳಿದ್ದರೂ ಇದು ಎಲ್ಲ ಸಂಸ್ಕೃತಿಯ ಪ್ರಾದೇಶಿಕ ಕಾದಂಬರಿಗಳಿಗೆ ಅನ್ವಯಿಸುತ್ತದೆ.. ಸಾಮಾನ್ಯ ಪಾತ್ರಗಳ ಸ್ವಭಾವ ನಿರೂಪಣೆಯಲ್ಲಿ, ಕಥನ ಕ್ರಮದಲ್ಲಿ, ಜೀವನ ಸಂಘರ್ಷದಲ್ಲಿ, ಸ್ತ್ರೀ–ಸಂಸ್ಕೃತಿಯಲ್ಲಿ, ಅಧ್ಯಾತ್ಮಿಕ ದರ್ಶನದಲ್ಲಿ, ಪ್ರಾದೇಶಿಕ ಪ್ರತಿಭೆ ಗಮನಕ್ಕೆ ಬರುತ್ತದೆ..

1970ರ ನಂತರದ ಸಾಹಿತ್ಯದ ಹೊಸ ಅಲೆಯಾದ ಬಂಡಾಯದಲ್ಲಿ ತಮ್ಮನ್ನು ಗುರುತಿಸಿಕೊಂಡ ಕವಿ, ಕಥೆಗಾರ ಜಂಬಣ್ಣ ಅಮರಚಿಂತರು ಒಬ್ಬ ಉತ್ತಮ ಕಾದಂಬರಿಕಾರರೆಂಬುದನ್ನು ತಮ್ಮ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯಿಂದ ಸಾಬೀತು ಪಡಿಸಿದ್ದಾರೆ. ಇದು ಇವರ ಮೊದಲ ಕಾದಂಬರಿಯಾದರೂ ಮಹತ್ವದ ಕೃತಿಯಾಗಿದೆ. ಬುಡಕಟ್ಟಿನ ಕೊರವ ಜನಾಂಗದ ಸಮಗ್ರ ಸಂಸ್ಕೃತಿಯ ಚಿತ್ರಣದೊಂದಿಗೆ ಅಲ್ಲಿನ ಸಂಘರ್ಷವನ್ನುವನ್ನು ಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ. ಇದು ಯಾವುದೇ ಒಂದು ವ್ಯಕ್ತಿ, ಪಾತ್ರದ ಸುತ್ತ ಹೆಣೆದ ಕಥೆಯಲ್ಲ. ಇಡೀ ಕೊರವ ಜನಾಂಗದ ಆಗು–ಹೋಗುಗಳ, ಬದುಕು ಬವಣೆಗಳ, ರೂಢಿ–ರಿವಾಜುಗಳ, ಸಂಸ್ಕೃತಿ–ಸಂಘರ್ಷ ಸಮಸ್ಯೆ–ಸಂಪ್ರದಾಯಗಳ ಮೇಲೆ ಬೆಳಕು ಚೆಲ್ಲತ್ತದೆ. ಸ್ವತಃ ಲೇಖಕರೇ ಹೇಳುವ ಹಾಗೆ "ತಮ್ಮ ತಟ್ಟಿ ಹೋಟೆಲಿನ ಅಂಗಳದಲ್ಲಿ ನಡೆಯುವ ಕೊರವರ ನ್ಯಾಯ ಪಂಚಾಯತಿಗಳಾದರೆ, ಜಗಳ–ಜೂಟಿ, ಬೈಗುಳ–ಹೊಡೆದಾಟ–ಬಡಿದಾಟಗಳೆಲ್ಲದರಲ್ಲಿ ಅವರು ಪ್ರೇಕ್ಷಕರಾಗಿ ಹಾಜರಿದ್ದು, ಅವರ ಮಾತು, ಭಾಷೆ, ಬೈಗುಳ, ನ್ಯಾಯ, ಜಗಳಗಳೆಲ್ಲವನ್ನು ಬಹು ಆತ್ಮೀಯತೆಯಿಂದ ಕಾತುರತೆಯಿಂದ ವೀಕ್ಷಿಸುತ್ತಿದ್ದರು. ಹೀಗಾಗಿ ಅವರಿಗೆ ಕೊರವರ ಜೊತೆ ಅನ್ಯೋನ್ಯ ಸಂಬಂಧವಿದೆ."[4] ಅಲ್ಲದೇ ಕೊರವರ ವೇಷಭೂಷಣ, ಅವರಾಡುವ 'ಕುಳಿರ್ ಭಾಷೆ' ಅರ್ಥವಾಗದಿದ್ದರೂ ಲೇಖಕರನ್ನು ಆಕರ್ಷಿಸಿದ್ದವು ಎಂಬುದು ಈ

ಕಾದಂಬರಿ ಓದಿದ ಯಾರಿಗಾದರೂ ತಟ್ಟನೆ ತಿಳಿಯುತ್ತದೆ.

**ಕೊರವ ಜನಾಂಗದ ಸಂಸ್ಕೃತಿ ಹಾಗು ಸ್ತ್ರೀ ಸಂಘರ್ಷ**

ಅಂಕುಶದೊಡ್ಡಿ ಎಂಬ ಹೆಸರಿನ ಪರಿಚಯದೊಂದಿಗೆ ಕಾದಂಬರಿ ಆರಂಭಗೊಳ್ಳುತ್ತದೆ. ಇಲ್ಲಿನ ಮುಖ್ಯ ಪಾತ್ರ ಕೊರವರ ಕುರುಮಯ್ಯ. ಈತ ಕೊರವ ಜನಾಂಗದ ನಾಯಕ. ಗುಡಿಸಲು, ಕೌದಿ, ಕೋಳಿ, ನಾಯಿಕಾಟ, ಈಚಲು ಮರದ ಚಾಪೆಗಳು, ಬಾರಿಗೆ, ಹಂದಿ ಕುನ್ನಿಗಳು ಹೀಗೆ ಮೊದಲಾದವುಗಳ ನಿರೂಪಣೆಯೊಂದಿಗೆ ಕೊರವರ ದಿನನಿತ್ಯದ ಆಡುಭಾಷೆಯಲ್ಲಿ ಕಥೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆರಂಭದಲ್ಲಿ ಲಂಬಾಣಿಗಳ ತಾಂಡ್ಯಾ, ನಂತರ ಅದು ಅಂಕುಶದೊಡ್ಡಿಯಾದದ್ದು, ಆ ನಂತರ ಈ ಅಂಕುಶದೊಡ್ಡಿ ಕೊರವ ಜನಾಂಗದ ತಾಂಡೆಯಾಗಿ ಮಾರ್ಪಟ್ಟಿರುವುದರ ವರ್ಣನೆಯಿದೆ.

ಹಿಂದೆ ಇದೊಂದು ಭಯಂಕರ ಅರಣ್ಯವಾಗಿದ್ದು ರಾಜರು ಹಿಡಿದು ತಂದ ಕಾಡಾನೆಗಳನ್ನು ಮಾವುತರು ಅಂಕುಶದಿಂದ ತಿವಿದು ಅವುಗಳನ್ನಿಲ್ಲಿ ಪಳಗಿಸುತ್ತಿದ್ದರು. ಆದುದರಿಂದಲೇ ಈ ಪ್ರದೇಶಕ್ಕೆ ಅಂಕುಶದೊಡ್ಡಿಯೆಂಬ ಹೆಸರು ಬಂತು. ಕೊರವರ ಈ ದೊಡ್ಡಿಯನ್ನು ಹೊಕ್ಕು ಬರಬೇಕಾದರೆ ಚಕ್ರವ್ಯೂಹ ಕೋಟೆ ಭೇದಿಸಿ ಹೊರಬಂದಂತೆ. ಇಲ್ಲಿ ಸರಿಯಾದ ರಸ್ತೆಗಳಿಲ್ಲ. ಕಲ್ಲು ಬಂಡೆಗಳಿಂದಾದ ನಿರ್ಗಮ ಪ್ರದೇಶವಿದು. ಜೋಪಡಿಗಳು ಒಂದಕ್ಕೊಂದು ಅಂಟಿಕೊಂಡು ಅವುಗಳ ಹಿಂದೆ ಮುಂದೆ ಕೋಳಿ ಹಂದಿ ಮತ್ತವುಗಳ ಕುನ್ನಿಗಳ ಮಂದೆ. ಇಂಥ ಅವ್ಯವಸ್ಥೆಯ ದುರ್ಗಂಧದ ಮಡಿಲಿನಲ್ಲಿ ಕೊರವ ಜನಾಂಗದ ಬಾಳೂ ಅತ್ಯಂತ ಶೋಚನೀಯವಾಗಿ ಸಾಗುತ್ತಿತ್ತು. ಬಡತನ, ಕಳುವು, ಹಾದರ, ಕುಡಿತ ಈ ಜನಾಂಗದ ದೌರ್ಬಲ್ಯವಾದರೆ ಇನ್ನೊಂದೆಡೆ ಉಳ್ಳವರ ಮೇಲ್ವರ್ಗದವರ ಶೋಷಣೆಯ ವಿವಿಧ ಆಯಾಮಗಳು. ಇಂತಹ ಸ್ಥಿತಿಯಲ್ಲಿದ್ದ ಕೊರವರಲ್ಲಿ ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳು ನೆರವೇರುತ್ತಿದ್ದವು. ಕೊರವರದು ಒಂದು ವಿಶಿಷ್ಟ ರೀತಿಯ ಉಪ ಸಂಸ್ಕೃತಿ. ಜನಾಂಗದ ಆಚರಣೆಯ ಹಿಂದೆ ಕೊರವರ ಬಡತನ ನೋವು ನಲಿವುಗಳ ಜೊತೆಯಲ್ಲಿ ಅನಿವಾರ್ಯತೆಯ ಪಾಲೂ ಇದೆ. ತಮ್ಮ ವಲಯದಲ್ಲಿ ತಮಗೆ ದಕ್ಕಿದ ವಸ್ತು ವಿಷಯ ಮತ್ತು ಘಟನೆಗಳ ಸುತ್ತ ಮುತ್ತ ಈ ಸಂಸ್ಕೃತಿ ಅಣಿಯಾಗಿದೆ. ಇವರಿಗೆ ಸುಲಭವಾಗಿ ಕೈಗೆಟುಕುವ ವಸ್ತುಗಳೆಂದರೆ ಹೆಂಡ, ಹಂದಿಯ ಮಾಂಸ ಮತ್ತು ಗುಡಿಯಲ್ಲಿರುವ ದೇವಿಯ ಕರಿಕಲ್ಲಿನ ಶಿಲೆ.

ಕೊರವರು ತಮ್ಮ ಜಾತ್ರೆ ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಹೆಂಡದ ಗಡಿಗೆಗಳಿಗೂ ಸಹ ಹೂಮಾಲೆ ಹಾಕಿ ಪೂಜೆ ಸಲ್ಲಿಸಿ ಕೊರಳಲ್ಲಿದ್ದ ದೇವಿಯ ಸಣ್ಣ ಸಣ್ಣ ಪದಕಗಳಿಗೆ ಮತ್ತು ಕೈಓಳಗಿದ್ದ ದೇವರ ಮೂರ್ತಿಯ ಕಡಗಗಳಿಗೆ ಹೆಂಡವನ್ನು ಮುಟ್ಟಿಸಿ ನೈವೇದ್ಯ ಮಾಡುತ್ತಾರೆ. ದೇವಿಯ ಹರಕೆಗೆ ಬಿಟ್ಟ ಕೋಣವನ್ನು ಬಲಿಕೊಟ್ಟು ಅದರ ಕತ್ತರಿಸಿದ ಮುಂಗಾಲೊಂದನ್ನು ದೇವಿ ಮಾರೆಮ್ಮನ ಮೂರ್ತಿಯ ಚಾಚಿದ ಬಾಯಲ್ಲಿ ಇಡಲಾಗುತ್ತದೆ.. ಇದೊಂದು ವಿಚಿತ್ರ ಪದ್ಧತಿ. ಈ ಮೂಲಕ ದೇವಿಯನ್ನು ತೃಪ್ತಿ ಪಡಿಸಲಾಗುತ್ತಿದೆ ಎಂಬ ಕೊರವರ ನಂಬುಗೆ. ಅಲ್ಲದೆ ಜಾತ್ರೆಯ ಸಮಯದಲ್ಲಿ ಭಕ್ತಾದಿಗಳು ಬತ್ತಲೆ ಸೇವೆಯನ್ನು ಮಾಡಿ ತಮ್ಮ ಹರಕೆಯನ್ನು ಮುಟ್ಟಿಸುವ ವಾಡಿಕೆಯೂ ಇದೆ. ಸಾಮಾನ್ಯವಾಗಿ ಇಂಥ ಬಲಿಕೊಡುವ ಪದ್ಧತಿ ಮತ್ತು ಬತ್ತಲೆ ಸೇವೆ ಶೂದ್ರ ಜನಾಂಗದ ಸಂಸ್ಕೃತಿಯಲ್ಲಿಯೇ ಕಾಣಸಿಗುತ್ತದೆ ವಿನಃ ಇನ್ಯಾವ ಸಂಸ್ಕೃತಿಯಲ್ಲಿಲ್ಲ.

ಹೀಗೆ ಕೊರವರ ಸಂಸ್ಕೃತಿಯ ಆಚರಣೆಗಳು ಬಿಚ್ಚಿಕೊಳ್ಳುತ್ತಾ ಕಾದಂಬರಿ ಮುಂದೆ ಸಾಗುತ್ತದೆ. ಕೊರವರ ಪಂಚರು ನೀಡಿದ ತೀರ್ಪೇ ಅಂತಿಮ ತೀರ್ಪು. ಕೆಳ ಜನಾಂಗದ ಒಂದು ಘಟನೆಯಲ್ಲಿ ಕೊರವರ ಪಂಚರು ನೀಡಿದ ತೀರ್ಪಿನಂತೆ ಬುಡ್ಡಮ್ಮನನ್ನು ಜಂಬಯ್ಯ ಕೂಡಿಕೆ ಮಾಡಿಕೊಳ್ಳುತ್ತಾನೆ. ಅದಕ್ಕಾಗಿ ಕುಶಾಲಪ್ಪ ಸಾಹುಕಾರನಿಂದ ಮೂರು ನೂರು ರೂಪಾಯಿ ಸಾಲ ತಂದು ಅಲ್ಲಿ ನೆರೆದ ಜನರಿಗೆಲ್ಲ ಮಾಂಸದೂಟ ಹಾಕಿಸಿ ಹೆಂಡ ಕುಡಿಸಿ ಕೂಡಿಕೆ ಶಾಸ್ತ್ರ ಮುಗಿಸುತ್ತಾನೆ. ಇಂಥ ಒಂದು ಪದ್ಧತಿ ಈ ಜನಾಂಗದಲ್ಲಿದೆ. ಬುಡ್ಡಮ್ಮನಿಗಾಗಿ ರವಿಕೆ, ಸೀರೆ, ಬಳೆ ಕೊಂಡು ತಂದು ಪೋಪಲಮ್ಮ ದೇವಿಯ ಗುಡಿಯಲ್ಲಿ ಸೀರೆಯುಡಿಸುವ ಪದ್ಧತಿ ಮುಗಿಸಿ ಕೊರಳಿಗೆ ತಾಳಿ ಕಟ್ಟಿ ಬುಡ್ಡಮ್ಮನನ್ನು ತನ್ನೊಂದಿಗೆ ಕೂಡಿಕೆಯನ್ನು ಮಾಡಿಕೊಂಡು ಕರೆದೊಯ್ಯುತ್ತಾನೆ. ಈ ರೀತಿ ಕೊರವರಲ್ಲಿ ಗಂಡ ಬಿಟ್ಟ ಪರಿತ್ಯಕ್ತೆಯರನ್ನು, ವಿಧವೆಯರನ್ನು ಬೇರೊಬ್ಬ ಗಂಡಸು ಈ ಕೂಡಿಕೆ ಶಾಸ್ತ್ರದ ಮೂಲಕ ಮರು ಮದುವೆಯಾಗುವ ಸಂಪ್ರದಾಯ ಬಳಕೆಯಲ್ಲಿತ್ತು. ಇದೊಂದು ಅಸಂಪ್ರದಾಯಿಕ ವಿವಾಹ. ಒಂದು ಸೀಮಿತ ಸಮಾಜದಿಂದ ಒಪ್ಪಿತವಾಗಿ ರೂಢಿಯಲ್ಲಿದ್ದ ಪದ್ಧತಿಯಿದು. ಯಾವ್ಯಾವುದೋ ಕಾರಣಗಳಿಂದ ಹೆಣ್ಣೊಬ್ಬಳ ಬಾಳು ಹಾಳಾಗುವುದನ್ನು ತಪ್ಪಿಸುವ ಒಂದು ವಿಶಾಲ ದೃಷ್ಟಿಕೋನ ಈ ಪದ್ಧತಿಯಲ್ಲಿರುವುದು ಕಾಣಬಹುದು. ಇದು ಉಡಿಕೆಯಾಗಿರಲಿ ಅಥವಾ ಸೀರುಡಿಕೆಯಾಗಿರಲಿ ಇದರ ಉದ್ದೇಶ ಮಾತ್ರ ಒಂದೇ ಆಗಿದ್ದು ಅದು ವಿವಾಹದ ಉದ್ದೇಶವನ್ನೇ ಹೊಂದಿರುತ್ತದೆ.

ಸಮಾಜದ ಬೇರೆ ಸಂಸ್ಕೃತಿಗಳಲ್ಲಿ ಹೊರನೋಟಕ್ಕೆ ಇದೊಂದು ಕೆಟ್ಟ ಪದ್ಧತಿ ಸಾಮಾಜಿಕ ಪಿಡುಗು, ಮರ್ಯಾದೆಗೇಡಿನ ಕೆಲಸವೆಂದು ಕಂಡು ಬಂದರೂ ಈ ಕೆಳ ಜನಾಂಗದಲ್ಲಿ ಅಸಹಾಯಕ ಹೆಣ್ಣುಗಳಿಗೆ ಒಂದು ಹೊಸ ಜೀವನ ಕೊಡುವ ಸಂಘರ್ಷ ಈ ಸಂಸ್ಕೃತಿಯಲ್ಲಿದೆ. ಈ ನಿಟ್ಟಿನಲ್ಲಿ ಮೇಲ್ಜಾತಿಯ ಹೆಣ್ಣುಗಳಿಗಿಂತ ಕೆಳಜಾತಿಯ ಹೆಣ್ಣುಗಳ ಜೀವನ ಸ್ವತಂತ್ರತೆಯಿಂದ ಕೂಡಿದೆಯೆನ್ನಬಹುದು. ಅಲ್ಲದೆ ಯಾವುದೇ ಆಚಾರ, ಸಂಪ್ರದಾಯ, ನಂಬಿಕೆಗಳ ಮೂಲಕ ಅಥವಾ ವಿವಾಹ ಪದ್ಧತಿಗಳಿಂದ ಅವಳನ್ನು ಶೋಷಿಸಲಾಗುವುದಿಲ್ಲ. ಇಂತಹ ವಾಸ್ತವಿಕ ಸ್ಥಿತಿಗತಿಗಳನ್ನು ಪ್ರಾದೇಶಿಕ ಮತ್ತು ದಲಿತ ಬಂಡಾಯ ಕಾದಂಬರಿಗಳಲ್ಲಿ ಕಾಣಲು ಸಾಧ್ಯವಿದೆ.[5] ಕೊರವರಲ್ಲಿ ಕುಡಿತ ಜೂಜು, ಕಳವು, ತುಂಬಾ ಸಾಮಾನ್ಯ ಮತ್ತು ಸಹಜ ಎಂದು ಕಾದಂಬರಿಯಲ್ಲಿ ಹೇಳಲಾಗಿದೆ. ಗಂಡು ಹೆಣ್ಣು ಕೂಡಿಯೇ ಕುಡಿಯುತ್ತಾರೆ, ಹೆಂಡ ಸಾರಾಯಿಗಳು ಅವರ ಮುಖ್ಯ ಕುಡಿತಗಳು. ವರ್ಷಕ್ಕೊಮ್ಮೆ ನಡೆಯುವ ಮಾರೆಮ್ಮನ ಜಾತ್ರೆಗೆ ಹೋಗುವಾಗ ಗ್ಯಾನಪ್ಪ ದೌಲ್ಯಾ, ಜಂಬಯ್ಯ ಮೊದಲಾದವರು ದಾರಿಯಲ್ಲಿ ಈಚಲ ಬನದಿಂದ ಹೆಂಡವನ್ನು ಕಳವು ಮಾಡಿಕೊಂಡು ತಮ್ಮ ಮಣ್ಣಿನ ಕೊಡಗಳಲ್ಲಿ ತುಂಬಿಕೊಂಡು ಜಾತ್ರೆಯಲ್ಲಿ ಜನಜಂಗುಳಿಯಿಲ್ಲದ ಜಾಗ ನೋಡಿ ತಾವು ಕದ್ದು ತಂದು ಹೆಂಡದ ಗಡಿಗೆಗಳನ್ನು ಕೆಳಗಿಳಿಸಿ ಹೀರುತ್ತಾರೆ.

ಇಂಥ ಪದ್ಧತಿಗಳನ್ನು ಹೊಂದಿರುವ ಈ ಸಂಸ್ಕೃತಿಯಲ್ಲಿ ಇನ್ನೊಂದು ಘೋರವಾದ ಆಚರಣೆಯನ್ನು ನೋಡಬಹುದು. ಕೊರವರು ತಮ್ಮ ಆಸ್ತಿ ಪಾಸ್ತಿ ದನಕರುಗಳನ್ನು ಮಾರಾಟ ಮಾಡುವಂತೆ ತಮಗೆ ಬೇಡವಾದ ಹೆಂಡಂದಿರನ್ನು ಇನ್ನೊಬ್ಬರಿಗೆ ಮಾರಾಟ ಮಾಡುವ ಪದ್ಧತಿಯನ್ನು ಮಾಡಿಕೊಂಡಿದ್ದಾರೆ. ಹೆಣ್ಣುಗಳನ್ನು ಮಾರಾಟ ಮಾಡುವ ಪದ್ಧತಿ ಈ ಜನಾಂಗದಲ್ಲಿದ್ದು ಇದು ಹೆಣ್ಣಿನ ಶೋಷಣೆಯ ಪರಮಾವಧಿ ಎನ್ನುವಂತಿದೆ. ಬುಡ್ಡಮ್ಮನ ಎರಡನೆಯ ಗಂಡ ಜಂಬಣ್ಣ ಅವಳನ್ನು ತಾಯಪ್ಪನಿಗೆ ನಾನೂರು ರೂಪಾಯಿಗೆ ಮಾರುತ್ತಾನೆ. ಅವಳು ಎಷ್ಟೇ ಗೋಗರೆದರೂ ಅವನು ಕೇಳದೆ ದನದ ವ್ಯಾಪಾರದಂತೆ ಅವಳ ಮಾರಾಟ ಮಾಡುತ್ತಾನೆ. “ಇವಳ ವಯಸ್ಸೆಷ್ಟು?, ಏಸು ಕೂಸು ಹುಟ್ಟಿಯಾವ ಇವಳಿಗೆ?, ಕೂಸನ್ನು ಇವಳು ತನ್ನೊಂದಿಗೆ ತರಬಾರದು” ಎಂಬ ಮಾತುಗಳು ಖರೀದಿಸುವ ತಾಯಪ್ಪನ ಪ್ರಶ್ನೆಗಳು ಮತ್ತು ಕರಾರುಗಳು. ಈ ರೀತಿಯಾಗಿ ತಮಗೆ ಬೇಡವಾದ ಮಡದಿಯ ಮಾರಾಟ ಕೊರವ ಜನಾಂಗದಲ್ಲಿದ್ದಂತೆ ಬೇರಾವ ಬುಡಕಟ್ಟಿನ ಜನಾಂಗದಲ್ಲಿಯೂ ಇಂಥ ಕ್ರೂರ ಪದ್ಧತಿ ಇಲ್ಲ.

ಈ ಜನಾಂಗದಲ್ಲಿ ಗಂಡಸರು ಹೆಣು ಮಕ್ಕಳನ್ನು ಶೋಷಿಸುವುದು, ಅವಳನ್ನು ಒಂದು ವಸ್ತುವಿನಂತೆ, ದನಕರುಗಳಂತೆ ಬಳಸಲ್ಪಟ್ಟಿರುವುದೂ ಕಂಡುಬರುತ್ತದೆ. ಬೇಕಾದಾಗ ಮದುವೆಯಾಗುವ ಮತ್ತು ಬೇಡವಾದಾಗ ಮಾರಿಬಿಡುವ ಕೆಟ್ಟ ಸಂಪ್ರದಾಯ ಇಲ್ಲಿಯ ಹೆಂಗಸರನ್ನು ಜರ್ಝರಿತಗೊಳಿಸಿದೆ. ಈ ಸಂದರ್ಭದಲ್ಲಿ ಕೊರವರ ಪಂಚರು ಮಾಡುವ ನ್ಯಾಯವೆಂದರೆ ಹೆಂಡತಿಯನ್ನು ಬಿಟ್ಟ ಮಾರೆಪ್ಪನಿಗೆ ಮಗುವನ್ನು ಒಪ್ಪಿಸಬೇಕೆಂಬುದು. ಕೊರವರಲ್ಲಿ ತಂದೆಗೆ ಮಕ್ಕಳನ್ನು ಒಪ್ಪಿಸುವ ರಿವಾಜು ಹಿಂದಿನಿಂದ ನಡೆದುಕೊಂಡು ಬಂದಿದ್ದು. ಅಂಥ ರಿವಾಜುಗಳನ್ನು ಮುರಿಯಲು ಪಂಚರು ಒಪ್ಪುವುದಿಲ್ಲ. ಆದ್ದರಿಂದ ತಾಯಿ ಮತ್ತು ಮಗುವನ್ನು ಅಗಲಿಸುವ ಹಾಗು ಹೆಣ್ಣನ್ನು ಒಬ್ಬರಿಂದ ಇನ್ನನೊಬ್ಬರಿಗೆ ಮಾರಾಟ ಮಾಡುವ ಒಂದು ಅಮಾನವೀಯ ಅಂಶ ಈ ಸಂಸ್ಕೃತಿಯಲ್ಲಿದೆ., ಇದರ ವಿರುದ್ಧ ಹೋರಾಡಲಾಗದೆ ಬುಡ್ಡಮ್ಮ ಬಹಳ ನೋವನ್ನುಭವಿಸಿ ಸೋತು ತನ್ನ ಮಗುವಿವನೊಂದಿಗೆ ಆತ್ಮಹತ್ಯೆ ಮೊರೆ ಹೋಗುತ್ತಾಳೆ. ಈ ಚಿತ್ರಣವಂತೂ ಮನ ಕಲಕುವಂತಿದೆ. ಈ ಸಂಸ್ಕೃತಿಯ ಅಡಿಯಲ್ಲಿ ಒಳ್ಳೆಯ ಮತ್ತು ಒಳ್ಳೆಯದಲ್ಲದ ಎರಡೂ ಪದ್ಧತಿಗಳ ಸಂಘರ್ಷ ವ್ಯಕ್ತವಾಗಿದೆ. ವಿಧವೆ, ಪರಿತ್ಯಕ್ತೆಯನ್ನು ಮರು ಮದುವೆ ಮಾಡಿಕೊಳ್ಳುವ, ಹೆಣ್ಣು, ಗಂಡುಗಳ ಸಮಾನ ದುಡಿತ–ಕುಡಿತ ಮತ್ತು ಸಹ ಜವಾಬ್ದಾರಿಯನ್ನು ಹೊರುವುದು, ತಾನು ದುಡಿದದ್ದನ್ನು ಖರ್ಚು ಮಾಡುವ ಆರ್ಥಿಕ ಸ್ವಾತಂತ್ರ್ಯ ಈ ಜನಾಂಗದ ಸ್ತ್ರೀಯರಿಗಿದೆ.

**ಮೇಲು– ಕೀಳಿನ ಭಾವನೆ– ಕಳ್ಳತನದ ವರ್ತನೆ**

ಸಮಾಜದ ಪ್ರತಿಯೊಂದು ಜನಾಂಗದಲ್ಲಿರುವಂತೆ ಕೊರವರಲ್ಲಿಯೂ ಸಹ ಮೇಲು ಕೀಳಿನ ಸಂಘರ್ಷವು ಕಾಣ ಸಿಗುತ್ತದೆ. ಅವರು ಅದೆಷ್ಟೇ ಕೆಳ ಜನಾಂಗದವರಾಗಿದ್ದರೂ ತಮಗಿಂತ ಕೆಳಗಿರುವ ಹೊಲೆ–ಮಾದಿಗರನ್ನು ಅಸ್ಪೃಶ್ಯರಾಗಿ ಕಾಣುತ್ತಿದ್ದರೆಂಬ ರೂಢಿಗೆ ಕಾದಂಬರಿಯಲ್ಲಿನ ಒಂದು ಘಟನೆ ಸಾಕ್ಷಿಯಾಗಿದೆ. ಕ್ಷಯರೋಗಿ ಮಾರೆಪ್ಪ ಒಂದು ದಿನ ರಾಯಪುರದ ಹರಿಜನವಾಡಿಯ ಮುದುಕಿಯೊಬ್ಬಳಿಂದ ಭಿಕ್ಷೆ ಬೇಡಿ ರೊಟ್ಟಿ ತಂದು ತಿಂದಿದ್ದನ್ನು ಕೊರವರ ಗ್ಯಾನಪ್ಪ ನೋಡಿ ಅದನ್ನು ನಾಯಕ ಕುರುಮಯ್ಯನ ಮುಂದೆ ಅಪರಾಧವೆಂಬಂತೆ ಹೇಳುತ್ತಾನೆ. ತಾಂಡ್ಯಾದ ಜನಕ್ಕೆ ಈ ಸುದ್ದಿ ತಿಳಿದು ಅವರು ದಂಗಾಗಿ ಬಿಡುತ್ತಾರೆ. ಏಕೆಂದರೆ ಅವರಲ್ಲಿ ಕೀಳುಜಾತಿಯ ಹೊಲೆ ಮಾದಿಗರಲ್ಲಿ ಭಿಕ್ಷೆ ಸ್ವೀಕರಿಸುವುದು ನಿಷೇಧವಿತ್ತು. ಆದರೆ ಅವರಿಗಿಂತ ದೊಡ್ಡ ಜಾತಿಯ ಬಳಿ ಭಿಕ್ಷೆ ಬೇಡುವುದು ಬಳಕೆಯಲ್ಲಿತ್ತು. ಇದರಿಂದ ಅತ್ಯಂತ ಹಿಂದುಳಿದ ಬುಡಕಟ್ಟಿನ ಜನಾಂಗಕ್ಕೂ ಮೇಲರಿಮೆ– ಕೀಳರಿಮೆ ಎಂಬ ಭಾವನೆ ಇದ್ದದ್ದು ಆಭಾಸವೆನಿಸುತ್ತದೆ. ಉಪವಾಸವಿದ್ದರೂ ಚಿಂತೆಯಿಲ್ಲ ತಮಗೆ ಕೀಳಾಗಿ ಕಂಡ ಜಾತಿಯವರ ಹತ್ತಿರ ಭಿಕ್ಷೆ ಬೇಡುವುದು ಅತಿ ಕೆಟ್ಟದ್ದು ಎಂದು ಭಾವಿಸುತ್ತಿದ್ದರು. ಜಾತಿಯ ಸಂಘರ್ಷವು ಕೂಡ ಈ ಜನಾಂಗದಲ್ಲಿರುವುದು ವಿದಿತವಾಗುತ್ತದೆ.

ಕೊರವರ ನ್ಯಾಯ ಪಂಚಾಯಿತಿಯ ಸನ್ನಿವೇಶದಲ್ಲಿ ಮಾರೆಪ್ಪ–ಬುಡ್ಡಮ್ಮನದು ಒಂದು ಪ್ರಸಂಗವಾದರೆ, ಇನ್ನೊಂದು ತಾಯೇರಿ–ಬುಡ್ಡಪ್ಪನದು. ತಮ್ಮ ಕುಲದಿಂದ ಹೊರಹಾಕಲಾಗಿದ್ದ ಬುಡ್ಡಪ್ಪನೊಂದಿಗೆ ತಾಯೇರಿ ಕದ್ದು ಮುಚ್ಚಿ ದೇವರ ಗುಡಿಯಲ್ಲಿ ಮದುವೆಯಾದ ಸುದ್ದಿ ತಿಳಿದು ಕೊರವರು ನ್ಯಾಯ ಸೇರಿಸುತ್ತಾರೆ. ಜಾತ್ರೆಯಲ್ಲಿಯೇ ಒಂದು ಗಿಡದ ಕೆಳಗೆ ಹೆಂಡದಂಗಡಿಯ ಹತ್ತಿರ ಪಂಚಾಯಿತಿ ಸೇರಿ ವಿಚಾರಣೆ ಪ್ರಾಂಭವಾಗುತ್ತದೆ. ತಾಯೇರಿಯನ್ನು ಕುಲದಿಂದ ಬಹಿಷ್ಕಾರ ಹಾಕಿ ಕುಲದವರಾರೂ ಅವರಿಬ್ಬರಿಗೆ ಬೆಂಕಿ ನೀರು ಕೊಡಬಾರದು, ಮಾತನಾಡಿಸಬಾರದು ಮತ್ತು ಕೊರವರ ಪಾಲಿಗೆ ಅವರೀರ್ವರು ಸತ್ತರು ಎಂದು ತಿಳಿಯಬೇಕು ಎಂಬುದಾಗಿ ಕೊರವರ ನಾಯಕ ಕುರುಮಯ್ಯ ತೀರ್ಪು ನೀಡುತ್ತಾನೆ. ಸೇರಿದ್ದ ಜನರಲ್ಲಿ ಕೆಲವರು "ಅವರಿಬ್ಬರನ್ನು ಸುಮ್ಮನೆ ಬಿಡಬಾರದು, ತಲೆ ಬೋಳಿಸಿ ಉಳ್ಳಾಗಡ್ಡಿ ಕಟ್ಟಿ ಕತ್ತೆ ಮ್ಯಾಲೆ ಕೂರಿಸಿ ಮೆರವಣಿಗೆ ಮಾಡಬೇಕು" ಎಂದು ಕೂಗಾಡುತ್ತಾರೆ. ಆದರೆ ತೀರ್ಪುಗಾರ ಅದನ್ನೆಲ್ಲ ಪರಿಗಣಿಸುವುದಿಲ್ಲ. ಆದರೂ ಸಹ ತಪ್ಪಿತಸ್ಥರಿಗೆ ಇಂಥ ಅವಮಾನಕರ ಮತ್ತು ಅಮಾನವೀಯ ಶಿಕ್ಷೆ ಕೊಡುವ ಪದ್ಧತಿ ಕೊರವ ಸಂಸ್ಕೃತಿಯಲ್ಲಿತ್ತೆಂಬುದು ಕಂಡು ಬರುತ್ತದೆ.

ಕೊರವರಲ್ಲಿ ಕುಡಿತ, ಜೂಜು, ಕಳವು ಸಾಮಾನ್ಯವಾಗಿ ಅವರ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಗಂಡು ಹೆಣ್ಣು ಒಟ್ಟಾಗಿಯೇ ಕುಡಿಯುತ್ತಾರೆ. ಹೆಂಡ ಮತ್ತು ಸಾರಾಯಿಗಳು ಇವರ ಮುಖ್ಯ ಕುಡಿತಗಳು. ವರ್ಷಕ್ಕೊಂಮೆ ನಡೆಯುವ ಕುಂಚೂರು ಮಾರೆಮ್ಮನ ಜಾತ್ರೆಗೆ ಹೋಗುವಾಗ ಗ್ಯಾನಪ್ಪ, ದವಲ್ಯಾ, ಜಂಬಯ್ಯ ಮೊದಲಾದವರು ದಾರಿಯಲ್ಲಿ ಈಳಿಗೇರರ ಕಣ್ಣು ತಪ್ಪಿಸಿ ಈಚಲ ಬನದಿಂದ ಹೆಂಡ ಕಳವು ಮಾಡಿಕೊಂಡು ತಮ್ಮ ತಮ್ಮ ಮಣ್ಣಿನ ಕೊಡಗಳಲ್ಲಿ ತುಂಬಿಕೊಂಡು ಹೋಗಿ ಜಾತ್ರೆಯಲ್ಲಿ ಜನಜಂಗುಳಿಯಿಲ್ಲದ ಜಾಗ ನೋಡಿ ಗಿಡ ಮರಗಳ ನೆರಳಿನಲ್ಲಿ ತಮ್ಮ ಸರಕು ಸಮಾನುಗಳೊಂದಿಗೆ ಕದ್ದು ತಂದ ಹೆಂಡದ ಗಡಿಗೆಗಳನ್ನು ಕೆಳಗಿಳಸುತ್ತಾರೆ. ಕೊರವರು ಮೆರವಣಿಗೆಯಲ್ಲಿ ದೇವಿಗುಡಿಗೆ ಹೋಗಿ ತಮ್ಮ ಕುರಿ, ಕೋಳಿ, ಹಂದಿಗಳನ್ನು ಬಲಿಕೊಟ್ಟು, ತಾವಿಳಿದ ಸ್ಥಳಕ್ಕೆ ಹೋಗಿ ಅವುಗಳನ್ನು ಸುಟ್ಟು, ಸುಲಿದು ಅಡುಗೆ ಮಾಡುತ್ತಾರೆ. ಹೆಂಡದ ಮಡಿಕೆಗಳಿಗೆ ಪೂಜೆ ಮಾಡಿ ಕುಡಿಯಲು ಶುರುಮಾಡುತ್ತಾರೆ. ಕೋಳಿಯ ಪಂದ್ಯದ ಜೂಜು ಇವರಲ್ಲಿದೆ ಎಂಬುದಕ್ಕೆ ಇಲ್ಲಿ ಬರುವ ಮಲ್ಲೆಬಾದಿ ಗುಡ್ಡಗಳ ನಡುವೆ ನಡೆಯುವ ಜಂಬಯ್ಯ ಮತ್ತು ಸಂಶಾಲಪ್ಪನ ಆಳುಗಳ ಕೋಳಿ ಪಂದ್ಯ ಸಾಕ್ಷಿಯಾಗುತ್ತದೆ.

ಇಡೀ ಕಾದಂಬರಿಯುದ್ದಕ್ಕೂ ಗಮನಕ್ಕೆ ಬರುವ ಒಂದು ಮುಖ್ಯ ಅಂಶವೆಂದರೆ ಕೊರವರು ಕೊರವರಾಗಿ ಹುಟ್ಟಿರುವುದಕ್ಕೆ ಬಹಳಷ್ಟು ನೋವು, ದುಃಖವನ್ನು ಅನುಭವಿಸುವ ಮತ್ತು ಅದನ್ನು ಆಯಾ ಸಂದರ್ಭಕ್ಕನುಗುಣವಾಗಿ ಪದೇ ಪದೇ ನೋವಿನಿಂದ ಹೇಳಿಕೊಳ್ಳುವ ಪ್ರಸಂಗಗಳು ಬರುತ್ತವೆ. ಅಂಥದರಲ್ಲಿ ಕಾದಂಬರಿಯ ಕೆಲ ಪಾತ್ರಗಳು "ಇದೆಲ್ಲ ನಮ್ಮ ಕರ್ಮ, ಯಾವ ಜಲ್ಮದಾಗ ಏನು ಪಾಪ ಮಾಡಿದ್ವ್ಯೋ, ಕರಕರ ಮೊಂಡೆರಾಗಿ, ಕೊರವರಾಗಿ ಹುಟ್ಟೀವಿ" ಎಂಬಂಥ ಮಾತಾಡುತ್ತವೆ. ಈ ನಿಟ್ಟಿನಲ್ಲಿ ಕೊರವರಿಗೆ ಸಿಕ್ಕಂತಹ ಬದುಕು ಸ್ಥಾನ ಮಾನ ಎಂಥದ್ದೆಂಬುದನ್ನು ಅರಿತುಕೊಳ್ಳಬಹುದು. ಅದಲ್ಲದೆ ಕೊರವರ ಸಂತಾನದ ಕುರಿತು ಅವರ ಸಂಸ್ಕೃತಿಯಲ್ಲಿ ಒಂದು ನಂಬುಗೆಯಿದೆ. ಅದೆಂದರೆ ದುರ್ಯೋಧನನ ದುರ್ಬುದ್ಧಿಯಿಂದ ಬೇಸತ್ತ ಧರ್ಮರಾಯ ರಾಜ್ಯಭಾರ ಬಿಟ್ಟು ಅಡವಿಗೆ ಹೋಗುತ್ತಾನೆ. ಅಡವಿಗೆ ಹೋದ ಧರ್ಮರಾಜನನ್ನು ಬಹಳ ಪ್ರೀತಿಸುತ್ತಿದ್ದ ಹುಡುಗಿಯೊಬ್ಬಳು ಅವನನ್ನು ಹುಡುಕಿ ಕರೆದುಕೊಂಡು ಬರಬೇಕೆಂದು ಮನೆ ಬಿಟ್ಟು ಹೋಗುತ್ತಾಳೆ. ಆಗ ಅವಳು ಕಣಿ ಹೇಳುವ ಕೊರವಂಜಿ ವೇಷ ಹಾಕಿ ಊರೂರು ಸುತ್ತುತ್ತ ಕೊನೆಗೆ ಧರ್ಮರಾಯನ ಪತ್ತೆ ಹಚ್ಚಿ ಅವನನ್ನು ಸೇರುತ್ತಾಳೆ. ಅದರ ಫಲವಾಗಿ ಗರ್ಭಿಣಿಯಾಗಿ ಅವರಿಬ್ಬರಿಗೆ ಹುಟ್ಟಿದ ಸಂತಾನವೇ ಕೊರವರು ಎಂಬ ಪ್ರತೀತಿಯಿದೆ. ಹೀಗಾಗಿ ಅವರೆಲ್ಲ ಪಾಂಡವರ ಸಂತಾನ, ಕೃಷ್ಣ ಪರಮಾತ್ಮ ಕೊರವರನ್ನು ಕಾಪಾಡುವುದಕ್ಕಾಗಿ ಅವರಲ್ಲಿಯೇ ನೆಲೆಸಿರುವನು ಎಂಬ ನಂಬಿಕೆಯು ಪುರಾಣಗಳಲ್ಲಿ ವ್ಯಕ್ತವಾಗುತ್ತದೆ.[6]

ಐತಿಹಾಸಿಕ ಘಟನೆಯನ್ನು ನೋಡಿದರೆ ಕೊರವ ಜನಾಂಗದ ನಾಯಕ ಹಿಂದೊಮ್ಮೆ ರಜಾಕಾರರ ಗಡಿ ಬಿಡಿಯಲ್ಲಿ ಬೋಳ ಬಂಡೆಪ್ಪನಿಗೆ ಕೊರವರು ಸಹಾಯ ಮಾಡಿದ್ದರ ಪರಿಣಾಮವಾಗಿ ಬೋಳ ಬಂಡೆಪ್ಪನು ಕೊರವರಿಗೆ ಝುರಿ ಬಾವಿಯನ್ನು

ಕುಡಿಯುವುದಕ್ಕಾಗಿ ಬಿಟ್ಟು ಕೊಟ್ಟಿರುವುದರ ಉಲ್ಲೇಖವು ಬರುತ್ತದೆ. ಇದರಿಂದ ಕೊರವರು ವೀರ ಶೂರರಾಗಿರುತ್ತಿದ್ದರೆಂಬುದು ತಿಳಿದು ಬರುತ್ತದೆ.
ಕೊರವರಲ್ಲಿ ಸಂಸ್ಕೃತಿಯ ಸಂಘರ್ಷವನ್ನು ಕುರುಮಯ್ಯ ಹಾಡುವ ಹಾಡಿನ ಮೂಲಕ ಕೊಡಲಾಗಿದೆ.

ರೈತೇನು ಕೊಟ್ಟ?
ಜ್ವಾಳಾ ಕೊಟ್ಟ.
ಜ್ವಾಳೇನು ಮಾಡಿದಿ?
ಕುಂಬಾರಗ ಕೊಟ್ಟ್ಯಾ.
ಕುಂಬಾರೇನು ಕೊಟ್ಟ?
ಗಡಿಗಿ ಕೊಟ್ಟ
ಗಡಿಗೇನು ಮಾಡಿದಿ?
ಬಾವಿಗೆ ಕೊಟ್ಟ್ಯಾ.
ಬಾಯೇನು ಕೊಟ್ತು?
ನೀರು ಕೊಟ್ತು.
ನೀರೇನು ಮಾಡಿದಿ?
ತ್ವಾಟಕ ಆಕಿದ್ಯಾ
ತ್ವಾಟೇನು ಕೊಟ್ತು?
ಹಣ್ಣು ಕೊಟ್ತು.
ಹಣ್ಣೇನು ಮಾಡಿದಿ?
ತಿನಬೇಕಂತ ಬಗಲಾಗ ಇಟಕಂಡ್ರೆ
ಧಣಿ ಬಂದು ಧನ್ನಂತ ಎತಿಗೊಂಡು ಹ್ವಾದ". . . .

ಜನಪದ ಗೀತೆಯಾದ ಈ ಹಾಡಿನಲ್ಲಿ ದುಡಿಯುವ ವರ್ಗ, ದುಡಿಮೆ ಮತ್ತು ಆ ದುಡಿತದ ಪ್ರತಿಫಲ ಅನುಭವಿಸುವಾತ ಬೇರೆ ಯಾರೋ ಎಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ತಿನಬೇಕಂತ ಇಟ್ಟುಕೊಂಡ್ರೆ ಧಣಿ ಬಂದು ಧನ್ ಅಂತ ಎತ್ತಿಕೊಂಡು ಹೋದ. ಕೊರವ ಜನಾಂಗಕ್ಕೆ ಶ್ರೀಮಂತಿಕೆಯ ಸಹಜವಾದ ದರ್ಪ, ದೌರ್ಜನ್ಯ, ಶೋಷಣೆ ಮತ್ತು ಅದೆಲ್ಲದರ ಸೂಕ್ಷ್ಮ ಪ್ರತಿಭಟನೆ ಕುರುಮಯ್ಯನ ಹಾಡಿನಲ್ಲಿ ಕಂಡು ಬರುತ್ತದೆ. ಶ್ರೀಮಂತ ಧಣಿಗಳ ಕ್ರೌರ್ಯ, ದರ್ಪವನ್ನು ಸಾರುವ ಹಾಡಿದು. ಇದೆಲ್ಲಾ ಗೊತ್ತಿದ್ರೂ ಸಹ ಅಸಹಾಯಕರಾದ ಕೊರವರು ಕಾದಂಬರಿಯುದ್ದಕ್ಕೂ ಶೋಷಣೆಯನ್ನು ಅನುಭವಿಸುತ್ತಲೇ ಹೋಗುತ್ತಾರೆ.
ಗೊಬ್ಬರ ವ್ಯಾಪಾರದ ಸಂಬಂಧವಾಗಿ ಕುರುಮಯ್ಯನಿಗೂ ಮತ್ತು ಧಣಿ ಸಂಶಾಲಪ್ಪನಿಗೂ ಆರಂಭವಾದ ಕಲಹ ಕೊನೆಗೆ ಶೋಷಣೆಯ ಮತ್ತು ಸಂಸ್ಕೃತಿಯ ಸಂಘರ್ಷದೊಂದಿಗೆ ಕೊನೆಯಾಗುತ್ತದೆ. ಕೊರವರ ಹೊಸ ದುಡಿಮೆಯನ್ನು ತಿಳಿದ ಸಂಶಾಲಪ್ಪ ಅವರ ಮೇಲೆ ಕತ್ತಿ ಮಸೆಯುತ್ತ ಬಹಳಷ್ಟು ರೀತಿಯಾಗಿ ಕಷ್ಟ ಕೊಟ್ಟು ಕಾಡಿಸುತ್ತಾನೆ. ಸಾಲವನ್ನು ಪಾವತಿಸಲು ಒತ್ತಾಯಿಸುತ್ತಾನೆ. ಹೊಡಿ ಬಡಿ ಮಾಡುತ್ತಾನೆ. ಇಂಥ ಎಲ್ಲ ಕ್ರೌರ್ಯವನ್ನು ಅನುಭಿಸುತ್ತಿರುವ ಕೊರವರು ಕೊನೆಗೆ ಕೈಯಲ್ಲಿ ಕಲ್ಲನ್ನೆತ್ತಿಕೊಂಡು ಶ್ರೀಮಂತ ಧಣಿಯ ವಿರುದ್ಧ ಪ್ರತಿಭಟಿಸಲು ಮುಂದಾಗುತ್ತಾರೆ. ಅಂಕುಶದೊಡ್ಡಿಯ ತುಂಬ ಗಲಭೆ, ಗದ್ದಲ, ಚೀರಾಟ, ನೋವು, ಸಾವು, ಬೆಂಕಿ ಹೊತ್ತಿಕೊಂಡು ಇಡಿ ಅಂಕುಶದೊಡ್ಡಿ ಉರಿದು ಹೋಗುತ್ತದೆ. ಕುಶಾಲಪ್ಪನ ಗೂಂಡಾಗಳು ಸಂಶಾಲಪ್ಪನ ಮೇಲಿರುವ ಸೇಡಿನಿಂದ ಕೊರವರನ್ನು ಬಲಿ ತೆಗೆದುಕೊಳ್ಳುತ್ತಾರೆ. ಕೊರವರನ್ನು ಬೆತ್ತಗಳಿಂದ ಥಳಿಸಿ ಅವರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ತಾಂಡ್ಯೆಯನ್ನು ಸುಟ್ಟು ನಾಶ ಮಾಡುತ್ತಾರೆ.

**ಸಮಾಧಿ ಸಂಘರ್ಷ**

ಇಂಥ ಸಂದರ್ಭದಲ್ಲಿ ಏನು ತೋಚದ ಕೊರವರು ಕೋರ್ಟು ಕಚೇರಿ ಎಂದು ಅಲೆದಾಡುತ್ತ ಕೊನೆಗೆ ಸೋತು ದಾರಿ ತೋಚದೆ ಬದುಕಲು ಆಶ್ರಯವಿಲ್ಲದೆ ನಿಸರ್ಗದ ಪ್ರಕೋಪಕ್ಕೆ ಬಲಿಯಾಗಿ ಬೆಟ್ಟದ ಮೇಲಿರುವ ಲಿಂಗೇಶ್ವರನ ದೇವಸ್ಥಾನದಲ್ಲಿ ಆಶ್ರಯ ಪಡೆಯುತ್ತಾರೆ.. ಗುಡಿಯನ್ನು ಹೊಕ್ಕಿದ ಕೊರವರಿಗೆ ಜಟಾಧಾರಿ ಸನ್ಯಾಸಿಯೊಬ್ಬ ಸಾಂತ್ವನ ನೀಡುತ್ತಾನೆ. ಅವರಿಗೆ ಸನ್ಯಾಸಿ ಶಂಭುಲಿಂಗಸ್ವಾಮಿ ಗುಡಿಯೊಳಗೆ ಬರಲು ಕರೆದು ಆಶ್ರಯ ನೀಡಿ ದೇವಸ್ಥಾನದಲ್ಲಿದ್ದ ಪ್ರಸಾದ ಕೊಡುತ್ತಾನೆ. ಸ್ವರ್ಗ ನರಕ ಎಲ್ಲೂ ಬೇರಡೆಯಿಲ್ಲ, ಇಲ್ಲಿಯೇ ಇದೆ ಎಂದು ಬೋಧನೆ ಮಾಡುತ್ತಾನೆ. ಅಲ್ಲಿಯೇ ಮಾರೆಪ್ಪನ ಸಾವುಂಟಾಗುತ್ತದೆ. ಜೋರಾದ ಮಳೆ, ಬಿರುಗಾಳಿಯಿದ್ದುದರಿಂದ ಹೆಣವನ್ನು ದಫನ ಮಾಡುವುದೊಂದು ಸಮಸ್ಯೆಯಾಗಿ ಬೆಟ್ಟದ ಕೆಳಗೆ ತೆಗೆದುಕೊಂಡು ಹೋಗಿ ಹೂಳುವುದು ಅಸಾಧ್ಯವಾಗುತ್ತದೆ. ಅವರಲ್ಲೇ ವಾದ ವಿವಾದ ನಡೆದು ಕೊನೆಗೆ ಗುಡಿಯ ಹಿಂಭಾಗದಲ್ಲಿದ್ದ ಸಾಧು ಸಂತರ ಸಮಾಧಿಗಳ ಮಧ್ಯೆ ಕುಣಿ ತೋಡಿ ಅಲ್ಲಿಯೇ ಹೂಳಿ ಬಿಡುತ್ತಾರೆ. ಗುಡಿಯ ಪೂಜಾರಿಯಾದ ಗುರುಲಿಂಗಸ್ವಾಮಿಗೆ ಈ ವಿಷಯ ಗೊತ್ತಾಗಿ ಭರಿಸಲಾಗದ ಸಿಟ್ಟು ಬಂದು ಕೊರವರೊಂದಿಗೆ ಆತ ಸಂಘರ್ಷಕಿಳಿಯುತ್ತಾನೆ. "ದೊಡ್ಡ ಮಹಾತ್ಮರ, ಸಾಧು ಸಂತರ ಸಮಾಧಿಗಳ ಮಧ್ಯೆದಲ್ಲಿ ಕೊರವರ ಗೋರಿಯೆಂದರೆ! ಇದಕ್ಕಿಂತ ಪಾಪ ಇನ್ಯಾವುದಿಲ್ಲ. ಕೊರವರೆಲ್ಲ ನರಕಕ್ಕೆ ಹೋಗ್ತೀರಿ" ಹೀಗೆ ಪೂಜಾರಿಯ ರೌದ್ರಾವತಾರವನ್ನು ಕಂಡ ಶಂಭುಲಿಂಗಸ್ವಾಮಿ ಮತ್ತು ಕೊರವರು ಭಯಭೀತರಾಗುತ್ತಾರೆ. ಇಲ್ಲಿ ಜಾತಿಯ ತಾರತಮ್ಯ, ಮೇಲು–ಕೀಳು, ಬಡವ–ಬಲ್ಲಿದ, ಸಂಸ್ಕೃತಿ ಮತ್ತು ಉಪ ಸಂಸ್ಕೃತಿಯ ಮಧ್ಯೆ ಇರುವ ದೊಡ್ಡ ತಾರತಮ್ಯ ಸಂಸ್ಕೃತಿಯ ಸಂಘರ್ಷವಾಗಿ ವ್ಯಕ್ತವಾಗುತ್ತದೆ.
ಕೊರವರು ಬೆಟ್ಟದ ಲಿಂಗೇಶ್ವರನ ದೇವಾಲಯ ಪ್ರವೇಶಿಸಿದ್ದೇ ದೊಡ್ಡ ಅನಾಹುತವಾಗಿ ಅದು ಕೊರವರ ಅಂತ್ಯವನ್ನು ಹಾಡುತ್ತದೆ. ಸಮಾಜ ಧರ್ಮ, ರೂಢಿ–ರಿವಾಜುಗಳಿಗೆ ಕೊರವರು ಬಹು ದೊಡ್ಡ ಅನ್ಯಾಯ ಮಾಡಿದರು, ಅವರಿಂದ ಧರ್ಮಕ್ಕೆ ಅನ್ಯಾಯವಾಗಿದೆ ಎಂದು ಮುಖ್ಯಸ್ಥರು ಅಂದುಕೊಳ್ಳುತ್ತಾರೆ. ಹೀಗಾಗಿ ಕೊರವರನ್ನು ಬಹಿಷ್ಕರಿಸಬೆಕೆಂದು ಅವರನ್ನು ಊರಿಂದಲೇ ಓಡಿಸಬೇಕೆಂದು ನಿರ್ಧಾರವಾಗುತ್ತದೆ. ಅಲ್ಲದೆ ಕೊರವರಿಂದ ಮೈಲಿಗೆಯಾದ ಗುಡಿಯಲ್ಲಿ ಶಾಂತಿ ಮಾಡಬೇಕು, ಸಪ್ತ ಭಜನೆ ಮಾಡಬೇಕು. ಕೊರವರು ಕಾಲಿಟ್ಟು ಅವರಲ್ಲೊಬ್ಬ ಅಲ್ಲೇ ಸತ್ತಿದ್ದರಿಂದ ಗುಡಿಯನ್ನು ಶುದ್ಧಿ ಮಾಡುವ ಪುಣ್ಯ ಕಾರ್ಯಕ್ಕೆ ಜನರೆಲ್ಲರು ತೆರೆದ ಮನಸ್ಸಿನಿಂದ ಧನಸಹಾಯ ಮಾಡಬೇಕು ಎಂದು ಪೂಜಾರಿ ಹೇಳುತ್ತಾನೆ. ಜನರು ಅವನ ಮಾತನ್ನು ನಂಬಿ ಹಣದ ಪಟ್ಟಿ ಬರೆಸಲು ಶುರು ಮಾಡುತ್ತಾರೆ.
ಶುದ್ಧಿ ಮಾಡುತ್ತ ಜನರೆಲ್ಲ "ಕುಲ ಕುಲವೆನ್ನುತಿಹರು ಕುಲ ಯಾವುದು ನಿತ್ಯ ಸತ್ಯುಳ್ಳ ಶರಣರಿಗೆ" ಮುಂತಾದ ಬೇರೆ ಬೇರೆ ಭಜನೆ ಪದಗಳನ್ನು ಹಾಡುತ್ತಿದ್ದರೆ ಅತ್ತ ಕೊರವರೆಲ್ಲ ಭಯಭೀತರಾಗಿ ತಲೆತಲಾಂತರಗಳಿಂದ ತಮಗೆ ಆಶ್ರಯ ನೀಡಿದ ಪ್ರದೇಶವನ್ನು ಬಿಟ್ಟು ಹೊರಡುತ್ತಾರೆ. ತಾವೇ ತೋಡಿದ ಬಾವಿಯಿಂದ ನೀರು ಕುಡಿಯುವ ಪುಣ್ಯ ತಮಗಿಲ್ಲ ಎಂದು ದುಃಖ ಪಟ್ಟರು. ಬೆಟ್ಟದೇಶ್ವರ ದೇವಾಲಯವನ್ನು ನೋಡುತ್ತಿದ್ದಂತೆ ಕುರುಮಯ್ಯನಿಗೆ ಆವೇಶ ರೋಷ ಹೆಚ್ಚಾಗಿ ಕೈಕಾಲು ನಡುಗಿ ಕೆಳಗೆ ಬಿದ್ದಿದ್ದ ಕಲ್ಲೊಂದನ್ನು ಎತ್ತಿಕೊಂಡು "ಎಲೆ, ಬೆಟ್ಟದ ಮ್ಯಾಲಿನ ಈಶ್ವರ ದ್ಯಾವ್ರೆ, ಮೇಲ್ಜಾತಿ ಮಂದೆಲ್ಲ ನಿನ್ನ ಹೆಣ್ತಿ ಮಕ್ಳೇನೋ? ನಾವೆಲ್ಲ ಅನೈತಿಕವಾಗಿ ಹುಟ್ಟಿದ ಮಕ್ಳೇನು ಬೊಗಳೋ" ಎಂದು ಕಲ್ಲನ್ನು ಬೀಸಿ ಒಗೆಯುತ್ತಾನೆ. ಆದರೆ ಆ ಕಲ್ಲು ಎಲ್ಲೋ ಹೋಗಿ

ಬೀಳುತ್ತದೆ. ಇದಕ್ಕೆ ಬೆಟ್ಟ ಯಾವ ಪ್ರತಿಕ್ರಿಯೆ ತೋರದೆ ಸುಮ್ಮನೆ ನಿಂತಿರುತ್ತದೆ. ಕೊರವರ ಪೀಡೆ ತೊಲಗಿ ಬೆಟ್ಟದ ಲಿಂಗೇಶ್ವರ ನಿನ್ನ ಮಹಿಮೆ ಅಪರಂಪಾರ್ ಎಂದು ಗುಡಿಯ ಪೂಜಾರಿ ತೆಂಗಿನ ಕಾಯಿ ಅರ್ಪಿಸಿ ಆರತಿ ಬೆಳಗುತ್ತಾನೆ.ಹೀಗೆ ಕಾದಂಬರಿ ಕೊನೆಯಾಗುತ್ತದೆ.ಕೊರವ ಜನಾಂಗದ ರಿವಾಜುಗಳೊಂದಿಗೆ ಆ ಸಂಸ್ಕೃತಿಯ ಸಂಘರ್ಷಗಳ ಒಳನೋಟಗಳಿವೆ.ಅಲ್ಲದೇ ಸಂಸ್ಕೃತಿಗಳ ನಡುವಿನ ಭಿನ್ನತೆ ವ್ಯಕ್ತವಾಗಿವೆ. ಕೆಳ ವರ್ಗದ ಶೂದ್ರ ಸಂಸ್ಕೃತಿಯ ಲಾಭವನ್ನು ಇನ್ನಿತರೇ ವರ್ಗವೂ ಹೇಗೆ ದುರುಪಯೋಗಪಡಿಸಿಕ್ಕೊತ್ತದೆ ಎಂಬ ತಿರುಳು ಇಲ್ಲಿದೆ.

**ಕೊನೆಟಿಪ್ಪಣಿಗಳು**


1. ಎಚ್. ಎಸ್. ರಾಘವೇಂದ್ರ ರಾವ್., **ಕನ್ನಡ ಸಾಹಿತ್ಯ ಮತು ಭಾಷಾ ಶಾಸ್ತ್ರ,** ಪು. 138, 1992
2. ಎ. ಎನ್ ಮೂರ್ತಿರಾವ್., **ಸಾಹಿತ್ಯ ಮತು ಸತ್ಯ,** ಪು. 20. ಡಿ.ವಿ.ಕೆ.ಮೂರ್ತಿ, ಮೈಸೂರು, 1995
3. ಡಾ. ಪಿ.ಕೆ. ಖಂಡೋಬ., **ಕನ್ನಡ ಪ್ರಾದೇಶಿಕ ಕಾದಂಬರಿಗಳಲ್ಲಿ ಜಾನಪದೀಯತೆ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999
4. ಜಂಬಣ್ಣ ಅಮರಚಿಂತ., **ಕುರುಮಯ್ಯ ಮತ್ತು ಅಂಕುಶದೊಡ್ಡಿ,** ಬಸಂತಕುಮಾರ್ ಸುಣಗಾರ, ಗುಲಬರ್ಗಾ, 1994
5. ದಸ್ತಗೀರ್ ಸಾಬ್ ಧಿನ್ನಿ(ಸಂ)., **ರಾಜಶೇಖರ ನೀರಮಾನ್ವಿ ಮತ್ತು ಜಂಬಣ್ಣ ಅಮರಚಿಂತರ ಸಾಹಿತ್ಯ,** ಕಾವ್ಯಶ್ರೀ. ಜಿ. ಅವರ ಲೇಖನ ಜಂಬಣ್ಣ ಅಮರ ಚಿಂತರ ಕಾದಂಬರಿ ಕುರುಮಯ್ಯ ಮತ್ತು ಅಂಕುಶದೊಡ್ಡಿ, ಕ.ಸಾ.ಅ, ಬೆಂಗಳೂರು, 2006
6. ಜಂಬಣ್ಣ ಅಮರಚಿಂತ., **ಕುರುಮಯ್ಯ ಮತ್ತು ಅಂಕುಶದೊಡ್ಡಿ,** ಪು. 15, ಬಸಂತಕುಮಾರ್ ಸುಣಗಾರ, ಗುಲಬರ್ಗಾ 1994